441 **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಪೌರಾಡಳಿತ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ಪುರಸಭೆಯ ಮುಖ್ಯಾಧಿಕಾರಿಯ ನಿರ್ಲಕ್ಷತನದಿಂದ IDSMT ಯೋಜನೆಯಡಿಯಲ್ಲಿ ನಿರ್ಮಾಣಗೊಂಡಿರುವ ಮಳಿಗೆಗಳು ಖಾಲಿ ಇದ್ದು ಪುರಸಭೆಗೆ ಬರುವ ಆದಾಯ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಖಾಲಿ ಇರುವ ಮಳಿಗೆಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಯೋಗ್ಯ ಕ್ರಮ ಕೈಗೊಳ್ಳುವುದೇ,

ಇ) ಸವಣೂರ ಪುರಸಭೆಗೆ ಕರ್ನಾಟಕ ನಗರ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ಮೂಲಕ KMRP ಗೆ ಆಯ್ಕೆಗೊಂಡಿದ್ದರೂ ಅದನ್ನು ಇಲ್ಲಿಯವರೆವಿಗೂ ಕಾರ್ಯರೂಪಕ್ಕೆ ತರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಈ ಯೋಜನೆಗೆ ತೀವ್ರಗತಿಯಲ್ಲಿ ಹಣ ಬಿಡುಗಡೆಗೊಳಿಸಿ ಕಾರ್ಯರೂಪಕ್ಕೆ ತರಲಾಗುವುದೇ?

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು)

ಅ) ಸವಣೂರ ಪುರಸಭೆ ವ್ಯಾಪ್ತಿಯಲ್ಲಿ IDSMT ಯೋಜನೆಯಡಿಯಲ್ಲಿ ಒಟ್ಟು 80 ಮಳಿಗೆಗಳನ್ನು ನಿರ್ಮಿಸಲಾಗಿದ್ದು ಈಗಾಗಲೇ 71 ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಗುತ್ತಿಗೆಗೆ ನೀಡಲಾಗಿದೆ ಉಳಿದ 9 ಮಳಿಗೆಗಳಿಗೆ ಬಿಡ್ದುದಾರರು ಭಾಗವಹಿಸದೇ ಇರುವುದರಿಂದ ಖಾಲಿ ಇರುತ್ತದೆ

ಆ) ಖಾಲಿ ಇರುವ 9 ಮಳಿಗೆಗಳನ್ನು ಮರು ಹರಾಜು ಮೂಲಕ ವಿಲೇವಾರಿ ಮಾಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು

ಇ) ಸವಣೂರ ಪುರಸಭೆಗೆ ರೂ 400 ಲಕ್ಷಗಳ ಬಂಡವಾಳ ಹೂಡಿಕೆ ಯೋಜನೆಯನ್ನು ತಯಾರಿಸಲಾಗಿದೆ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಯೋಜನಾ ಸಮಾಲೋಚಕರನ್ನು ನೇಮಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲಿಯೇ ನೇಮಕಾತಿ ಮಾಡಲಾಗುವುದು

ಈ) ಯೋಜನಾ ವರದಿಗೆ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಿಂದ ಅನುಮೋದನೆ ದೊರಕಿದ ಕೂಡಲೇ ಹಣವನ್ನು ಬಿಡುಗಡೆ ಮಾಡಲಾಗುವುದು

442 **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲೂಕಾ ಬಾಡಾ ಗ್ರಾಮದ ಸಂತ ಶ್ರೀ ಕನಕದಾಸರು ಜನ್ಮ ತಾಳಿದ ಸು–ಕ್ಷೇತ್ರವಾಗಿದ್ದರೂ ಇಲ್ಲಿಯವರೆವಿಗೂ ಯಾವುದೇ ಅಭಿವೃದ್ಧಿ ಕಾಣದೇ ಅತೀ ಹಿಂದುಳಿದ ಗ್ರಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಬಾಡಾ ಗ್ರಾಮವು ಭಾವೈಕ್ಯತೆಯ ಕೇಂದ್ರವಾಗಿರುವುದರಿಂದ ಸಂತ ಶ್ರೀ ಕನಕದಾಸರ ಪ್ರಾಧಿಕಾರವನ್ನು ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ,

ಇ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬಂದಿದೆ

ಆ) ಸರ್ಕಾರವು ಈಗಾಗಲೇ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಈ ಅಧಿನಿಯಮಯವನ್ನು ಜಾರಿಗೆ ಬರುವುದನ್ನು ಬಾಕಿ ಇಟ್ಟು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರವನ್ನು ಕಾರ್ಯಾದೇಶದ ಮೂಲಕ ಸರ್ಕಾರಿ ಆದೇಶ ನಂ ಕಂಇ ಆರ್‌ಇಹೆಚ್ 2005 ದಿನಾಂಕ 11 1 2007 ರಂದು ರಚನೆ ಮಾಡಿರುತ್ತದೆ ಅದರಲ್ಲಿ ಬಾಡಾ ಗ್ರಾಮದ ಅಭಿವೃದ್ಧಿಯ ಬಗ್ಗೆ ಆದ್ಯತೆ ಮೇಲೆ ಪರಿಗಣಿಸಲಾಗಿದೆ

ಇ) ಉದ್ಭವಿಸುವುದಿಲ್ಲ

443 (637) **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ನಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಣೂರ ಬಸ್ ಘಟಕದಲ್ಲಿರುವ ಅನೇಕ ಬಸ್‌ಗಳು ಸುಮಾರು 8 ಲಕ್ಷ ಕಿ ಮೀಗಿಂತ ಹೆಚ್ಚಿಗೆ ಓಡಿ ನಿರುಪಯುಕ್ತ (ಸ್ಕ್ರ್ಯಾಪ್) ಹಾಗೂ ಕವಚಗಳು ಸರಿಯಿಲ್ಲದೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ,